# ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ.

## ಸಿಸಿ ನಂ.181/2020

**ಫಿರ್ಯಾದಿಃ** ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ್ ಠಾಣೆ.

**-ಃಃ ವಿರುದ್ದ ಃಃ-**

**ಆರೋಪಿ/ತರುಃ** **ಇಬ್ರಾಹಿಂ ತಂದೆ ಮೀರಾಸಾಬ ಬೂದಿಹಾಳ,**
48 ವರ್ಷ, ಉಃ ಒಕ್ಕಲುತನ,
ವಾಸಃ ಉಡಚಾಣ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

----

## ದೋ ಷಾ ರೋ ಪ ಣೆ

ನಾನು ಶ್ರೀ ಅನಿಲ ಅಮಾತೆ, ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಅಫಜಲಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

1. ದಿನಾಂಕ 23.04.2020 ರಂದು ಬೆಳಿಗ್ಗೆ 07-30 ಗಂಟೆ ಸುಮಾರಿಗೆ ಅಫಜಲಪೂರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಉಡಚಾಣ ಗ್ರಾಮದಲ್ಲಿ ಚಾಸಾ-5 ಅಶೋಕ ರವರ ಅಂಗಡಿ ಮುಂದೆ ಫಿರ್ಯಾದಿ ಚಾಸಾ-1 ಮಹಿಬೂಬ ರವರು ನೀರು ತೆಗೆದುಕೊಂಡು ತನ್ನ ಮನೆಗೆ ಹೋಗುತ್ತಿರುವಾಗ, ಸದರಿ ಆರೋಪಿತನಾದ ನೀವು ಫಿರ್ಯಾದಿ ಚಾಸಾ-1 ಮಹಿಬೂಬರವರಿಗೆ ತಡೆದು ನಿಲ್ಲಿಸಿ, ಆ ಮೂಲಕ ಆರೋಪಿತನಾದ ನೀವು ಭಾ.ದಂ.ಸಂ.ಕಲಂ.341 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

2. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತನಾದ ನೀವು ಫಿರ್ಯಾದಿ ಚಾಸಾ-1 ಮಹಿಬೂಬ ರವರಿಗೆ ನಿನ್ನ ಹೆಂಡತಿ ನಮ್ಮ ಅಂಗಳದಲ್ಲಿ ಕಸ ಹಾಕಿ ನನ್ನ ಹೆಂಡತಿ ಜೊತೆ ಜಗಳ ಮಾಡ್ತ್ಯಾಳ ನೀ ಹೆಂಗಸರ ಜಗಳದಲ್ಲಿ ಅಡ್ಡ ಹೋಗಿ ನನ್ನ ಹೆಂಡತಿ ಮುಂದ ನಿನ್ನ ಧರ್ಪ ತೋರಿಸುತ್ತಿ ಮಗನೆ ಅಂತಾ ತಿಂಡಿಯಿದ್ದರೆ ನನ್ನ ಜೊತೆ ಜಗಳ ಮಾಡು ಬಾ ಮಗನೆ ಅಂತಾ ಅವಾಚ್ಯವಾಗಿ ಬೈದು, ಅವಮಾನ ಪಡಿಸಿದ್ದು, ಚಾಸಾ-1 ರವರು ಸಮಾಜದ ಶಾಂತಿಯನ್ನು ಕೆಡಿಸುವಂತೆ ಚಾಸಾ-1 ರವರನ್ನು ಉದ್ರೇಕಿಸಿದ ಕಾರಣ ಆ ಮೂಲಕ ಆರೋಪಿತನಾದ ನೀವು ಭಾ.ದಂ.ಸಂ.ಕಲಂ.504 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

3. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆಗ ಫಿರ್ಯಾದಿ ಚಾಸಾ-1 ಮಹಿಬೂಬ ರವರು ನೋಡು ಅಣ್ಣಾ ನಾನೆ ಜಗಳ ಬಿಡಿಸಿ ಕಳುಹಿಸಿ ನನ್ನ ಹೆಂಡತಿಗೆ ಬೈದು ಬುದ್ದಿ ಹೇಳಿನಿ ಅಂತಾ ಅಂದಾಗ, ಸದರಿ ಆರೋಪಿತನಾದ ನೀವು ಏಬೋಸಡಿ ಮಗನೆ ಸುಳ್ಳು ಹೇಳುತಿ ಅಂತಾ ಅಲ್ಲೆ ಬಿದ್ದ ಬಡಿಗೆಯಿಂದ ಫಿರ್ಯಾದಿ ಚಾಸಾ-1 ಮಹಿಬೂಬ ರವರ ತಲೆಯ ಮೇಲೆ ಜೋರಾಗಿ ಹೊಡೆದು ಮತ್ತು ನಿನ್ನ ಜೇಬಿನಲ್ಲಿದ್ದ ಚಾಕು ತೆಗೆದು ಚಾಸಾ-1 ರವರ ಹೊಟ್ಟೆಗೆ ಚಾಕುವಿನಿಂದ ಹೊಡೆಯಲು ಬಂದಾಗ, ಆಗ ಫಿರ್ಯಾದಿ ಚಾಸಾ-1 ಮಹಿಬೂಬರವರು ತನ್ನ ಕೈಯಿಂದ ಹಿಡಿದಿರುತ್ತಾನೆ ಆಗ ಚಾಕು ಕೈಗೆ ಹತ್ತಿ ತೀವ್ರ ಸ್ವರೂಪದ ರಕ್ತಗಾಯವಾಗಲು ಕಾರಣನಾಗಿ, ಆ ಮೂಲಕ ಆರೋಪಿತನಾದ ನೀವು ಭಾ.ದಂ.ಸಂ.ಕಲಂ. 324 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ. ಹರದಿದ್ದು

4. ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಸದರಿ ಆರೋಪಿತನಾದ ನೀವು ನಿನ್ನ ಪ್ಯಾಂಟಿನ ಜೇಬಿನಲ್ಲಿದ್ದ ಚಾಕು ತೆಗೆದು ಫಿರ್ಯಾದಿ ಚಾಸಾ-1 ಮಹಿಬೂರವರಿಗೆ ಖಲ್ಲಾಸ ಮಾಡೆ ಬಿಡುತ್ತೇನೆ ಅಂತಾ ಜೀವ ಬೆದರಿಕೆ ಹಾಕಿದ ಕಾರಣ, ಆ ಮೂಲಕ ಆರೋಪಿತನಾದ ನೀವು ಭಾ.ದಂ.ಸಂ.ಕಲಂ.506 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

**ಆರೋಪಿತನ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆ ನಡೆಯಬೇಕಾ?

ಉಃ

(ದೋಷಾರೋಪಣೆಯನ್ನು ಆರೋಪಿತನಿಗೆ ಓದಿ ಹೇಳಿದ್ದು, ಆತನು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕ 07-11-2024 ಪ್ರ.ದ.ನ್ಯಾ.ದಂ.ಅಫಜಲಪೂರ.